**O.S.No.284/2021 - P.W.3**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.   ದಿನಾಂಕ : 04-06-2024.**

**ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದ :**

**1)** ನನಗೆ ಈ ಪ್ರಕಾರಣದಲ್ಲಿ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಯಾವುದೇ ಸಮನ್ಸ್ ಬಂದಿರುವುದಿಲ್ಲ. ವಾದಿ ಕರೆದುಕೊಂಡು ಬಂದಿರುವುದರಿಂದ ನಾನು ನ್ಯಾ ಯಾಲಯಕ್ಕೆ ಬಂದಿರುತ್ತೇನೆ. ಸರ್ವೆ ಸಂಖ್ಯೆ 198 ಗೋಮಾಳ ಜಮೀನು ಎಂದರೆ ಸರಿ. ಅದರ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಸದರಿ ಸತ್ತಿನಲ್ಲಿ 4 ಎಕರೆ 1 ನೇ ಪ್ರತಿವಾದಿಗೆ 1961-62 ರಲ್ಲಿ ಮಂಜೂರು ಆಗಿರುತ್ತದೆ. ಹಾಗೆ ಮಂಜೂರು ಆಗಿರುವ ದಿನಾಂಕದಿಂದ ಇಂದಿನವರೆಗೂ ಸದರಿ ಸ್ವತ್ತಿನ ಸ್ವಾ ಧೀನವನ್ನು 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಹೊಂದಿರುತ್ತಾರೆ ಎಂದರೆ ಸರಿ. 2007 ನೇ ಇಸವಿಯಲ್ಲಿ ಸರ್ವೆ ಸಂಖ್ಯೆ 198 ಕೆಐಎಡಿಬಿ ಯವರು ಭೂ ಸ್ವಾ ಧೀನ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ 4 ಎಕರೆ ಜಮೀನಿನ ಖಾತೆ ಮತ್ತು ಪಹಣಿ ಈವತ್ತಿಗೂ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ವಾದಿಯ ತಂದೆ ಹನುಮಯ್ಯ ಅವರಿಗೆ ಇಬ್ಬರು ಗಂಡು ಮಕ್ಕಳು. ಸುಮಾರು ನಾಲ್ಕು ಜನ ಹೆಣ್ಣು ಮಕ್ಕಳು ಇರಬಹುದು. ಸರ್ವೆ ಸಂಖ್ಯೆ 198 ರಲ್ಲಿ ವಾದಿಗೆ ಸೇರಿದ ಇನ್ನೊಂದು 2 ಎಕರೆ ಜಮೀನು ಇದ್ದು ಅದರ ಭೂ ಸ್ವಾಧೀನದ ಪರಿಹಾರದ ಹಣವನ್ನು ಅವರು ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**